ಪಿ.ಎನ್.ಶ್ರೀವತ್ಸ, ಬೆಂಗಳೂರು

*ಸಿಟ್ಟು ಅರ್ಥಾತ್ ಕೋಪ: ಇದರ ನಿಜವಾದ ಅರ್ಥ?*



ತಲೆ ಕೆಲಸ ಮಾಡುವುದನ್ನು ನಿಲ್ಲಿಸಿ, ನಾಲಿಗೆ ಓವರ್‌ಟೈಂ ಕೆಲಸ ಮಾಡುವಂತಹ ಒಂದು ಸ್ಥಿತಿ.

ಎಂ.ಎನ್. ಸೋಮಶೇಖರ್, ಮೈಸೂರು

*ವಿಧವಿಧದ ಬಣ್ಣದ ಗುಲಾಬಿಗಳಿಂದ ಮನಸೆಳೆಯುವ ತೋಟದಲ್ಲಿ ನೀವು ಏಕಾಂಗಿಯಾಗಿ ಸುತ್ತಾಡಿದಾಗ ನಿಮ್ಮ ಬಯಕೆ ಹೇಗಿರುತ್ತದೆ?*

ಮತ್ತೆ ಮಗುವಾಗುತ್ತೇನೆ, ಚಿಟ್ಟೆಗಳ ಹಿಂದೆ ಸಾಗುತ್ತಾ, ಹಿಗ್ಗಿನಿಂದ ಕಾಲ ಕಳೆಯುತ್ತೇನೆ!

ಸುಮಾ ಜಿ, ಮದ್ದೂರು

*ನೆಮ್ಮದಿ ಎಲ್ಲಿದೆ?*

ಹೊಟ್ಟೆ ತುಂಬ ಹಾಲು ಕುಡಿದ ಹಸುಳೆಯ ಮುಖದಲ್ಲಿ, ಮನದಲ್ಲಿ.


ಶಂಕರ್, ಬೆಂಗಳೂರು

*ಗಂಡಸು ಮದುವೆಯಾದ ಮೇಲೆ ಗಂಡ ಆಗಬಹುದಾದರೆ ಹೆಂಗಸು ಯಾಕೆ ಹೆಂಡತಿ ಆಗಬೇಕು?*

ಗಂಡಸು=ಹೆಂಗಸು. ಆದ್ದರಿಂದ ಗಂಡ=ಹೆಂಗ. ಆದರೆ ಗ=ಗರ್ವ ಗರ್ವ=ಅತಿ. ಆದ್ದರಿಂದ ಗಂಡ=ಹೆಂಅತಿ. ಹೆಂಅತಿಯ ರೂಢೀಗತ ರೂಪವೇ ಹೆಂಡತಿ!

ಆರ್. ಮಧುಸೂದನ್, ಹಾಸನ

*ಕರಾಟೆ ಕಲಿತಿರುವ ಚೆಲುವೆಯೊಬ್ಬಳಿಗೆ ಮನಸೋತಿದ್ದೇನೆ. ಪ್ರೇಮ ನಿವೇದನೆ ಮಾಡಲು ಉಪಾಯ ತಿಳಿಸಿ...?*



ಗಾಳಿಯಲ್ಲೇ ಫ್ಲೈಯಿಂಗ್ ಕಿಸ್ ಕೊಡಿ. ಉತ್ತರದಲ್ಲಿ ಫ್ಲೈಯಿಂಗ್ ಕಿಸ್ ಬಂದರೆ ಉಲ್ಲಾಸ್, ಫ್ಲೈಯಿಂಗ್ ಕಿಕ್ ಬಂದರೆ ಖಲಾಸ್!

ಗೀತಾ ಬರ್ಲ, ಬೆಂಗಳೂರು

*ರಾಜಕಾರಣಿಗಳು ಸದಾ ಹಗರಣಗಳ ಸುತ್ತಲೇ ಗಿರಕಿ ಹೊಡೆಯುತ್ತಿರುತ್ತಾರಲ್ಲಾ, ಯಾಕೆ?*

ತಿಪ್ಪೆಯ ಸುತ್ತ ಅಲೆಯುವುದು ನೊಣಗಳ ಸ್ವಭಾವ!

ಆರ್. ನಾಗರಾಜ್, ಗೊರೂರು

*ಸಂಖ್ಯಾಶಾಸ್ತ್ರದ ಪ್ರಕಾರ ಹೆಸರು ಬದಲಿಸಿಕೊಳ್ಳೋ ರಾಜಕಾರಣಿಗಳ ಅದೃಷ್ಟವೂ ಬದಲಾಗುತ್ತಾ?*

ಇಲ್ಲ. ಆದರೆ ಸಂಖ್ಯಾಶಾಸ್ತ್ರ ಹೇಳುವವರ ಅದೃಷ್ಟ ಬದಲಾಗುತ್ತದೆ.

ಡಾ. ವಿನಯ ಶ್ರೀನಿವಾಸ್, ಶಿವಮೊಗ್ಗ

*ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಬದಿಗೊತ್ತಿ ಕೇವಲ ವಿಲಾಸ/ಹಣ/ಅಧಿಕಾರದ ಹಿಂದೆ ಓಡುತ್ತಿರುವ ಇಂದಿನ ಯುವಜನರಿಗೆ ನಿಮ್ಮ ಕಿವಿಮಾತೇನು?*

ಇಯರ್‌ಫೋನ್ ಸಿಕ್ಕಿಸಿಕೊಂಡು ಕುಣಿಯುವವರಿಗೆ ಕಿವಿಮಾತು ಕೇಳಿಸೀತೆ? ತನು ದಣಿದು, ಮನ ಸೋತರೆ ಮಾತ್ರ ಧನ ನೀಡುವ ತೃಪ್ತಿಯ ಮಿತಿ ತಿಳಿದೀತು!

ಸಂತೇಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

*ಮಾನ್ಯರೆ ಅಂತ ಮಾನ ಮರ್ಯಾದೆ ಇಲ್ಲದವರಿಗೂ ಕರೆಯಬಹುದೇ ಸಾರ್?*

ಮೊದಲು ಅವ ಎಂಬುದನ್ನು ಅವರಿಗೆ ಕೇಳಿಸದಂತೆ ಹೇಳಿ ನಂತರ ಮಾನ್ಯರೇ ಎನ್ನಿ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಹೆಸರು ನೋಡಿದರೆ ಶಾಂತಿನಿವಾಸ. ಆದರೆ ಆ ಮನೆಯಲ್ಲಿ ಶಾಂತಿಯಾಗಲಿ, ನೆಮ್ಮದಿಯಾಗಲಿ ಇಲ್ಲವಲ್ಲಾ ಗುರೂ?*

ಅದಕ್ಕೇಕೆ ಯೋಚನೆ. ಹೆಸರು ಬದಲಾಯಿಸಿದರಾಯ್ತು!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಹಣ ತುಂಬಿದ ತಿಜೋರಿಗೆ ಕನ್ನ ಹಾಕುವವರಿಗೂ, ಪ್ರೀತಿ ತುಂಬಿದ ಹೃದಯಕ್ಕೆ ಕನ್ನ ಹಾಕುವವರಿಗೂ ಏನು ವ್ಯತ್ಯಾಸ?*

ಅಲ್ಲಿ ಸಿಲುಕಿಕೊಂಡರೆ ಜೈಲು, ಇಲ್ಲಿ ಸಿಲುಕಿಕೊಂಡರೆ ಐಲು!

ವಿ.ಹಮೀದ್, ವಿಟ್ಲ

*ಆಕೆ ಸದಾ ನೆನಪಾಗುತ್ತಿದ್ದಾಳಲ್ಲಾ, ಏನ್ಮಾಡಲಿ ಸಾರ್?*

ಹೋಗಿ ಭೇಟಿಯಾಗಿ ಸಾಲ ಇಸ್ಕೊಳಿ. ಆಮೇಲೆ ಏನೇನೂ ಕಷ್ಟವಿಲ್ಲದೆ ಮರೆಯುತ್ತೀರಿ!

ನವಿರವಿ, ಬಾಳೆಹೊನ್ನೂರು

*ಅನ್ನ ಕೊಡುವ ದೇವರು ಅನ್ನಪೂರ್ಣೇಶ್ವರಿ. ರಾಗಿ, ಗೋಧಿ ಕೊಡುವ ದೇವರು?*

ಕಾಳ್ ಮುದ್ದೇಶ್ವರ, ಭೈರವೇಶ್ವರ!

## ಬಹುಮಾನಿತ ಪ್ರಶ್ನೆ

ಸುಧಾ ರಾಜ್, ಮೈಸೂರು

*ವಕ್ರ ದಂತಪಂಕ್ತಿಯನ್ನು ಸರಿಪಡಿಸುವಂತೆ ವಕ್ರಬುದ್ಧಿಯನ್ನು ಸರಿಪಡಿಸುವ ವೈದ್ಯರು ಸಿಗುವಂತಿದ್ದರೆ?*

ಪ್ರಪಂಚದಲ್ಲಿ ಹಾಸ್ಯಸಾಹಿತಿಗಳು, ಕಾರ್ಟೂನಿಸ್ಟ್‌ಗಳೇ ಇರುತ್ತಿರಲಿಲ್ಲ!

ಎನ್.ವಿ. ಶ್ರೀನಿವಾಸ್, ಮೈಸೂರು

*ಸಾಂಸ್ಕೃತಿಕ ನಗರವಾದ ಮೈಸೂರಿನಲ್ಲಿ ಸುಂದರವಾದ ಮುಖಗಳನ್ನು ಕೆಡಿಸುವ ಚಾಳಿ ಮೇಲಿಂದ ಮೇಲೆ ನಡೆಯುತ್ತಿದೆ. ಇದಕ್ಕೆ ಪರಿಹಾರ?*

ಕಲೆಯಲ್ಲಿ ಸುಂದರ ಮುಖ ಮೂಡಬೇಕು, ಸುಂದರ ಮುಖದಲ್ಲಿ ಕಲೆಗಳಲ್ಲ ಎಂಬುದನ್ನು ಅರ್ಥ ಮಾಡಿಸಿ.

ಅನಂತಪದ್ಮನಾಭ ಎಚ್.ಎಂ, ಮೈಸೂರು

*ಒಲ್ಲದ ಗಂಡನಿಗೆ ಮೊಸರಲ್ಲೂ ಕಲ್ಲು. ಒಲ್ಲದ ಹೆಂಡತಿಗೆ...?*

Mall ನಲ್ಲೂ ಮುಳ್ಳು!

ಜಾಕೋಬ್ ಡಿಸೋಜ, ಕುರುವಳ್ಳಿ

*ದಿನಭವಿಷ್ಯದಲ್ಲಿ ನನಗೆ ರಾಜಯೋಗ ಅಂತ ಬಂದಿದೆಯಲ್ಲಾ...?*



ಹುಷಾರ್! ರಾಜ ಎನ್ನುವುದು ಕೋಟಿ ಕೋಟಿ ರೂಗಳ ಹಗರಣದಲ್ಲಿ ಸಿಕ್ಕಿಬಿದ್ದು ಜೈಲ್ ಸೇರಿದವನ ಹೆಸರು!

ಯೋಗೀಶ್, ಕಾರ್ಕಳ

*ನನಗೆ ಎಲ್ಲರೂ ಬೇಕು, ನಾನು ಮಾತ್ರ ಯಾರಿಗೂ ಬೇಡ. ಯಾಕೆ ರಾಮ್ ಅವರೆ?*

ತಿಳಿಯಿತು ಬಿಡಿ. ನೀವು ಟೆಲಿಮಾರ್ಕೆಟಿಂಗ್ ವ್ಯಕ್ತಿ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಸೆಕ್ಸ್ ಅಂದ್ರೆ ಗೊತ್ತು, ಸೆನ್ಸೆಕ್ಸ್ ಅಂದ್ರೆ ಗೊತ್ತು, ಕ್ಯೂಸೆಕ್ಸ್ ಅಂದ್ರೆ ಗೊತ್ತು. ಆದರೆ ಇದ್ಯಾವುದು ಸಮ್ಮತಿ ಸೆಕ್ಸ್ ಮಿಸ್ಟರ್ ರಾಮ್?*

ಮತಿಯಿಲ್ಲದ ವಯಸ್ಸಿನಲ್ಲಿ ಕೆಟ್ಟಮತಿಯವನು ಮತಿಗೆಟ್ಟವಳೊಂದಿಗೆ ಮಾಡಿಕೊಳ್ಳುವ ಒಪ್ಪಂದ.

■ ರಾಮ್